**ಸಾಕ್ಷಿಗೆ ದಿನಾಂಕ 25.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ.ಸಿ ಬಿ ಕೆ ವಕೀಲರಿಂದಃ

ಸಾಕ್ಷಿಹಾಜರು ಮಾಡಿದ ಹೆಚ್ಚುವರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 31 | ಎಫ್ ಎಸ್ ಎಲ್ ವರದಿಯ ದೃಢೀಕೃತ ಪ್ರತಿ |
| ನಿ.ಪಿ 32 | ದಂಡ ಪ್ರಕ್ರಿಯಾ ಸಂಹಿತೆ ಕಲಂ 174 ರಡಿ ಸಲ್ಲಿಸಲಾದ ವರದಿ |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಎನ್ ಎಂ ಪಿ ವಕೀಲರಿಂದಃ**

1. ದೂರನ್ನು ನಾನೇ ನೀಡಿರುತ್ತೇನೆ. ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ಬಗ್ಗೆ ರವಿ ಎನ್ನುವವರು ತಿಳಿಸಿರುತ್ತಾರೆ. ಸದರಿ ರವಿಯವರು ಅಪಘಾತವನ್ನು ನೋಡಿಲ್ಲ ಎಂದರೆ ಅವರು ಹಿಂದಿನಿಂದ ಬರುತ್ತಿದ್ದರು, ಅಪಘಾತವಾದಾಗ ಅಪಘಾತಪಡಿಸಿದ ವಾಹನದ ಚಾಲಕನು ಸ್ಥಳದಲ್ಲಿಯೇ ಇದ್ದನು. ದೂರನ್ನು ದಿಃ06.11.2023 ರಂದು 4 ದಿನ ತಡವಾಗಿ ನೀಡಿರತ್ತೇನೆ. ರವಿ ಎನ್ನುವವರು ನಮ್ಮ ಊರಿನವರು. ಅಪಘಾತದ ದಿನವೇ ದೂರನ್ನು ನೀಡಲು ತೊಂದರೆ ಇರಲಿಲ್ಲ ಎಂದರೆ ಅಪಘಾತಪಡಿಸಿದ ವಾಹನದ ಮಾಲೀಕ/ಚಾಲಕ ಚಿಕಿತ್ಸೆಯ ಖರ್ಚನ್ನು ಭರಿಸುವುದಾಗಿ ಹೇಳಿ ದೂರು ನೀಡಬೇಡಿ ಎಂದು ಕೇಳಿಕೊಂಡಿದ್ದರು. 3 ದಿನ ಕಾದರು ಸಹ ಅಪಘಾತಪಡಿಸಿದ ವಾಹನದ ಮಾಲೀಕ ಬರದೇ ಇರುವುದರಿಂದ ದೂರು ನೀಡಿರುತ್ತೇನೆ. ಅಪಘಾತಪಡಿಸಿದ ವಾಹನದ ಮಾಲೀಕ ರವಿಕುಮಾರ್ ಆಗಿದ್ದು ಅವರು ಅಳಿಸಂದ್ರ ಗ್ರಾಮದವರು ಎಂದು ಗೊತ್ತಾಗಿರುತ್ತದೆ. ಅವರ ಪರಿಚಯ ನನಗೆ ಇರುವುದಿಲ್ಲ. ಸದರಿ ರವಿಕುಮಾರ್ ರವರಿಗೆ ಡಿಎಲ್ ಇರದೇ ಇರುವ ಬಗ್ಗೆ ನನಗೆ ಗೊತ್ತಿಲ್ಲ.

2. ಅಪಘಾತವಾದ ತಕ್ಷಣ ನನ್ನ ಪತಿಯನ್ನು ಆದಿಚುಂಚನಗಿರಿ ಬಿ ಜಿ ಎಸ್ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಅಪಘಾತಪಡಿಸಿದ ವಾಹನದ ಮಾಲೀಕರು ಆಸ್ಪತ್ರೆಗೆ ಬಂದಿರಲಿಲ್ಲ. ಈ ಕುರಿತು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಅಪಘಾತದಲ್ಲಿ ಒಳಗೊಂಡ ವಾಹನಗಳ ನೋಂದಣಿ ಸಂಖ್ಯೆಗಳನ್ನು ಹೇಳಿ ಬರೆಸಿಲ್ಲ ಎಂದರೆ ಸರಿ, ಆದರೆ ಬೈಕ್ ಗಳು ಎಂದು ಹೇಳಿರುತ್ತೇನೆ. ಅಪಘಾತಪಡಿಸಿದ ವಾಹನದ ಅಪಘಾತದ ಸ್ಥಳದಲ್ಲಿಯೇ ಇತ್ತು. ಅಪಘಾತಪಡಿಸಿದ ವಾಹನ ಅಪಘಾತದ ಸ್ಥಳದಲ್ಲಿಯೇ ಇದ್ದುದರಿಂದ ಬೈಕ್ ಸಂಖ್ಯೆಯನ್ನು ಕೊಡಬಹುದಾಗಿತ್ತು ಎಂದರೆ ವೈದ್ಯರು ಬೈಕ್ ಸಂಖ್ಯೆಯನ್ನು ಕೇಳಿರಲಿಲ್ಲ. ವೈದ್ಯರು ಬೈಕ್ ಸಂಖ್ಯೆಯನ್ನು ಕೇಳಿದ್ದರೂ ಸಹ, ನನ್ನ ಪತಿಗೆ ಅಪಘಾತಪಡಿಸಿದ ವಾಹನ ಬೇರೆ ಯಾವುದೋ ಇದ್ದುದರಿಂದ ಅಪಘಾತವು ಬೈಕ್ ಗಳ ಮಧ್ಯೆ ಆಗಿದೆ ಎಂದು ಮಾತ್ರ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ಒಂದನೇ ಎದುರುದಾರರ ವಾಹನವನ್ನು ಸುಳ್ಳಾಗಿ ಸೇರಿಸಿ 4 ದಿನ ತಡವಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ಪತಿ ಚಾಲನೇ ಮಾಡುತ್ತಿದ್ದ ದ್ವಿಚಕ್ರ ವಾಹನ ನನ್ನ ಪತಿಗೆ ಸೇರಿರುತ್ತದೆ. ಸದರಿ ದ್ವಿಚಕ್ರ ವಾಹನಕ್ಕೆ ವಿಮಾ ಪಾಲಿಸಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಅಪಘಾತದ ದಿನ ನನ್ನ ಪತಿ ಶಿರಸ್ತ್ರಾಣ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆದಿಚುಂಚನಗಿರಿ ಬಿ ಜಿ ಎಸ್ ಆಸ್ಪತ್ರೆಯಲ್ಲಿ 12 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದರು, ನಂತರ ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಗೆ ದಾಖಲಾಗಿದ್ದರು. ಸದರಿ ಆಸ್ಪತ್ರೆಯಲ್ಲಿ ನನ್ನ ಪತಿಯ ಕಾಲಿಗೆ 3 ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ನನ್ನ ಪತಿಯ ಕಾಲಿಗೆ 3 ಶಸ್ತ್ರಚಿಕಿತ್ಸೆ ಬಿಟ್ಟರೇ ಬೇರೆ ಯಾವುದೇ

ಭಾಗಕ್ಕೆ ಶಸ್ತ್ರಚಿಕಿತ್ಸೆ ಆಗಿಲ್ಲ ಎಂದರೆ ಸರಿ. ನನ್ನ ಪತಿಗೆ ಬೇರೆ ಯಾವುದೇ ಕಾರಣದಿಂದ ಅನಾರೋಗ್ಯವಿರಲಿಲ್ಲ. ನನ್ನ ಪತಿ ಬೇರೆ ಕಾರಣದಿಂದ ಮೃತಪಟ್ಟಿದ್ದು, ಅಪಘಾತದಿಂದ ಉಂಟಾದ ಗಾಯಗಳಿಂದ ಅಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ಮಧುಮೇಹವು ಅಪಘಾತದ ನಂತರ ಬಂದಿರುತ್ತದೆ. ಮಧುಮೇಹವು ಅಪಘಾತದ ನಂತರ ಬಂದಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ಮಧುಮೇಹ ಮುಂಚೆಯಿಂದ ಇದ್ದು ಅವರು ಆ ಕಾಯಿಲೆಯಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

4. ನನ್ನ ಪತಿಗೆ ರೂ.28,00,000/- ವೈದ್ಯಕೀಯಕ್ಕೆ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿಯು ಮಧುಮೇಹ ಚಿಕಿತ್ಸೆಗಾಗಿ 4 ಬಾರಿ ಆಸ್ಪತ್ರೆ ದಾಖಲಾಗಿದ್ದು, ಅಪಘಾತದಿಂದ ಉಂಟಾದ ಗಾಯಗಳಿಗಾಗಿ ಅಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ಚಿಕಿತ್ಸೆ ನೀಡಿದ ವೈದ್ಯರ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳು ಮಧುಮೇಹಕ್ಕೆ ಸಂಬಂಧಿಸಿರುವವು, ಅಪಘಾತದಿಂದಾದ ಗಾಯಗಳಿಗೆ ಅಲ್ಲ ಎಂದರೆ ಸರಿಯಲ್ಲ. ನನ್ನ ಪತಿಯ ಇತರೆ ಶವಸಂಸ್ಕಾರ ಮತ್ತು ಇತರೆ ಖರ್ಚುಗಳಿಗಾಗಿ ರೂ.1,25,000/- ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಪತಿಗೆ ಅಪಘಾತದ ಸಮಯಕ್ಕೆ 46 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ನನ್ನ ಪತಿ ವ್ಯವಸಾಯ ಮತ್ತು ತೆಂಗಿನ ಕಾಯಿ ವ್ಯಾಪಾರ ಮಾಡಿ ತಿಂಗಳಿಗೆ ರೂ.30,000/- ಸಂಪಾದಿಸುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಅಂಗನವಾಡಿ ಕಾರ್ಯಕರ್ತೆಯಾಗಿದ್ದು, ನನಗೆ ರೂ.10,000/- ಗೌರವಧನ ಬರುತ್ತದೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. 4 ನೇ ಅರ್ಜಿದಾರರು ಅವರ ಮಗಳ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ.27 ರ ಕ್ರಮ ಸಂಖ್ಯೆ 334 ರಿಂದ 352 ಎಲ್ಲವೂ ಅನುಕ್ರಮವಾಗಿದ್ದು ಅವುಗಳನ್ನು ನಾವೇ ಬರೆಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವನ್ನು ನೋಡಿದವರ ಸಾಕ್ಷ್ಯ ಮಾಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನ್ನ ಪತಿಯು ಯಾವುದೇ ಸಂಪಾದನೆ ಮಾಡುತ್ತಿರಲಿಲ್ಲ ಹಾಗೂ ಅವರೂ ಸಹ ನನ್ನ ಮೇಲೆ ಅವಲಂಬಿತರಾಗಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ.**

**ಮರು-ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**